ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 4, September-October 2025, Pp. 131-136
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS
editor@srujani.in
www.srujani.in

ಶರಣಸತಿ ಲಿಂಗಪತಿ: ಅಕ್ಕಮಹಾದೇವಿಯ ಅನುಭಾವ ಪ್ರಪಂಚ

ಕಲ್ಪನ ಪಿ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು.

Abstract:

ಹನ್ನೆರಡನೆ ಶತಮಾನದ ವಚನ ಚಳುವಳಿಯ ಪ್ರಮುಖ ಸಾಧಕಿ ಅಕ್ಕಮಹಾದೇವಿಯವರ ಶರಣ ಸತಿ – ಲಿಂಗಪತಿ ಎಂಬ ಪರಮೋಚ್ಚ ಅನುಭಾವಿಕ ಹಾಗೂ ಮಧುರ ಭಕ್ತಿಯ ಪರಿಕಲ್ಪನೆಯನ್ನು ವಿಶ್ಲೇಷಿಸುತ್ತದೆ. ಲೌಕಿಕ ಸ್ತ್ರೀ ಪುರುಷ ಸಂಬಂಧಗಳ ಸೀಮಿತ ಚೌಕಟ್ಟು, ಕೌಶಿಕ ನಂತಹ ರಾಜಭೋಗ ಮತ್ತು ಸಾಂಪ್ರದಾಯಿಕ ವಿವಾಹ ವ್ಯವಸ್ಥೆಯನ್ನು ಧಿಕ್ಕರಿಸಿ ಚೆನ್ನಮಲ್ಲಿಕಾರ್ಜುನನನ್ನೇ ತನ್ನ ಆಧ್ಯಾತ್ಮಿಕ ಪತಿಯನ್ನಾಗಿ ಸ್ವೀಕರಿಸಿದ ಅಕ್ಕನ ಜೀವನ ಮತ್ತು ವಚನಗಳ ಒಳನೋಟವನ್ನು ಇಲ್ಲಿ ಚರ್ಚಿಸಲಾಗಿದೆ. ಇತರ ಶರಣರ ಸತಿಪತಿ ಭಾವಕ್ಕಿಂತ ಭಿನ್ನವಾಗಿ ಅಕ್ಕನ ವಚನಗಳಲ್ಲಿ ಸ್ತ್ರೀ ಸಂವೇದನೆ, ವಿರಹ ವೇದನೆ, ಪ್ರೇಮದ ತೀವ್ರತೆ, ಅಂತರಂಗದ ತೊಳಲಾಟ ಹಾಗೂ ಸಾಮಾಜಿಕ ಬಂಡಾಯಗಳು ಅಭಿವ್ಯಕ್ತ ಗೊಂಡಿವೆ. ಲೌಕಿಕ ಶೃಂಗಾರವನ್ನು ಮೀರಿ ಪಾರಮಾರ್ಥಿಕ ಶೃಂಗಾರದ ಮೂಲಕ ಅತ್ಮಾರ್ಪಣೆ ಮಾಡಿಕೊಂಡು ಚೆನ್ನಮಲ್ಲಿಕಾರ್ಜುನನಲ್ಲಿ ಬೆರೆತು ಹೋದ ಅಕ್ಕಮಹಾದೇವಿಯವರ ಅನುಭಾವ ಪ್ರಪಂಚ, ವೈಚಾರಿಕ ದಿಟ್ಟತನ, ಹಾಗೂ ಆಧುನಿಕ ಸ್ತ್ರೀ ಸಮುದಾಯಕ್ಕೆ ಅವರ ಆದರ್ಶಗಳು ಹೇಗೆ ಸ್ಫೂರ್ತಿಯಾಗಿದೆ ಎಂಬುದನ್ನು ಈ ಲೇಖನವು ತೆರೆದಿಡುತ್ತದೆ.

Keywords: *ಶರಣಸತಿ ಲಿಂಗಪತಿ, ಅಕ್ಕಮಹಾದೇವಿ, ಚೆನ್ನ ಮಲ್ಲಿಕಾರ್ಜುನ, ಅನುಭಾವ ಪ್ರಪಂಚ, ಮಧುರ ಭಕ್ತಿ, ವಚನ ಚಳುವಳಿ, ಸ್ತ್ರೀ ಸಂವೇದನೆ.*

ಪೀಠಿಕೆ

ಶರಣಸತಿ ಲಿಂಗಪತಿಯೆಂಬುದು ಶರಣ ಪರಂಪರೆಯಲ್ಲಿ ಪರಮೋಚ್ಚ ಅನುಭಾವಿಕ ಸ್ಥಿತಿಯನ್ನು ಅಂದರೆ ಮಧುರ ಭಕ್ತಿಯನ್ನು ಸೂಚಿಸುವ ಪರಿಕಲ್ಪನೆ. ಲೌಕಿಕ ಜಗತ್ತಿನ ಸ್ತ್ರೀ ಪುರುಷ ಸಂಬಂಧದ ಸೀಮಿತ ಕಲ್ಪನೆಯನ್ನು ಮೀರಿ ಜೀವವು ಸತಿಯಾಗಿಯೂ, ಪರಶಿವನನ್ನು ಪತಿಯಾಗಿಯೂ, ಭಾವಿಸಿ ಒಂದಾಗುವ ಪ್ರಕ್ರಿಯೆ ಇದು. ಈ ತತ್ವವು ಕೇವಲ ತಾತ್ವಿಕ ಚಿಂತನೆಯಾಗಿ ಉಳಿಯದೆ ತನ್ನ ಇಡೀ ಅಸ್ತಿತ್ವದಲ್ಲೇ ಜೀವಂತವಾಗಿ ರೂಪಗೊಂಡಿದ್ದು ಅಕ್ಕಮಹಾದೇವಿಯವರ ಅನುಭಾವ ಪ್ರಪಂಚದಲ್ಲಿ.

ಅಕ್ಕನಿಗೆ ಬಾಲ್ಯದಿಂದಲೇ ಚೆನ್ನಮಲ್ಲಿಕಾರ್ಜುನನೇ ಸರ್ವಸ್ವ. ಕೌಶಿಕ ಮಹಾರಾಜನಂತಹ ಭೋಗ ಲಾಲಸೆಯ ಲೌಕಿಕ ರಾಜನ ಪ್ರಸ್ತಾವನೆಯನ್ನು ಎದುರಿಸಿ ರಾಜಭೋಗ ವಸ್ತ್ರಾಭರಣಗಳನ್ನು ಧಿಕ್ಕರಿಸಿ ಹೊರಬಂದದ್ದು ಕೇವಲ ಸಾಮಾಜಿಕ ಬಂಡಾಯವಲ್ಲ. ಅದು ತನ್ನ ಆಧ್ಯಾತ್ಮಿಕ ಪತಿಯಾದ ಚೆನ್ನಮಲ್ಲಿಕಾರ್ಜುನನ ಮೇಲಿನ ಏಕನಿಷ್ಠ ಪ್ರೇಮ.

12ನೇ ಶತಮಾನ ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಮಹತ್ತರ ಪರಿವರ್ತನೆಯನ್ನು ತಂದ ಕಾಲ.

Please cite this article as: ಕಲ್ಪನ, ಪಿ. (2025). ಶರಣಸತಿ ಲಿಂಗಪತಿ: ಅಕ್ಕಮಹಾದೇವಿಯ ಅನುಭಾವ ಪ್ರಪಂಚ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(4), 131–136

ವಿಶೇಷವಾಗಿ ಸ್ತ್ರೀಯರಿಗೆ ಸಮಾನತೆಯನ್ನು, ಅಭಿವ್ಯಕ್ತಿಯ ಅವಕಾಶವನ್ನು ತಂದುಕೊಟ್ಟ ಕಾಲ. ಅದುವರೆಗೂ ಬಾಯಿ ಇದ್ದು ಇಲ್ಲದಂತೆ ಬದುಕುತ್ತಿದ್ದ ಕೆಳವರ್ಗದ ಅಸಂಖ್ಯ ಜೀವಗಳು ಮತ್ತು ಶೂದ್ರಾತಿ ಶೂದ್ರಳೆಂದು ಅವಗಣನೆಗೆ ಒಳಗಾಗಿದ್ದ ಸ್ತ್ರೀಯರು ಮಾತನಾಡ ತೊಡಗಿದ್ದು ಹಾಗೂ ಸತ್ವ ಇದ್ದು ಪ್ರಕಟಗೊಳ್ಳಲಾಗದ ಆಲೋಚನೆಗಳು ಅನಾವರಣ ಗೊಂಡಿದ್ದು ವಚನ ಚಳುವಳಿಯ ಒಂದು ವಿಶೇಷ.

ಸಂಪ್ರದಾಯಗಳ ಸಂಕೋಲೆಯಲ್ಲಿ ಬಂದಿತರಾದ ಭಾರತದ ನಾರಿಯರಿಗೆ ಬಸವಣ್ಣನವರ ಆಗಮನವು ಅವರನ್ನು ಮುಕ್ತ ಮಾಡುವ ರೀತಿಯಲ್ಲಿ ಕೆಲಸ ಮಾಡಿತು. ಸ್ತ್ರೀಯರು ಪುರುಷರಿಗಿಂತ ಯಾವ ವಿಧದಲ್ಲೂ ಕಡಿಮೆ ಇಲ್ಲವೆಂಬ ಭಾವನೆಯನ್ನು ವ್ಯಕ್ತಪಡಿಸಿದ್ದಲ್ಲದೆ ಅವರು ಕೊಟ್ಟ ಸ್ತ್ರೀ ಸ್ವಾತಂತ್ರ್ಯ ಜಗತ್ತಿಗೆ ಮಾದರಿಯಾದದು. ಇಂತಹ ಶರಣ ಸಮುದಾಯದಲ್ಲಿ ಇಂದಿನ ಆಧುನಿಕ ಮಾನವ ಸಮುದಾಯವೂ ಅಚ್ಚರಿ ಪಡುವ ರೀತಿಯಲ್ಲಿ ಬಾಳಿ ಬೆಳಗಿದ ಸಾಧಕಿ ಅಕ್ಕಮಹಾದೇವಿ. ಉಡುತಡಿಯಿಂದ ಆರಂಭವಾದ ಅವಳ ಜೀವನ ಪಯಣ ಅನೇಕ ಕಷ್ಟ ಪರಂಪರೆಗಳೆದುರಿಸಿ ಕಲ್ಯಾಣ ತಲುಪುತ್ತಾಳೆ. ಅಲ್ಲಿ ಶರಣರು ಒಡ್ಡಿದ ಬೌದ್ಧಿಕ, ಆಧ್ಯಾತ್ಮಿಕ ಅಗ್ನಿಪರೀಕ್ಷೆಯಲ್ಲಿ ಜಯಿಸಿ ಶ್ರೀಶೈಲಕ್ಕೆ ತೆರಳುವ ಅಕ್ಕನ ಜೀವನ ಒಂದು ಪರಮಾದ್ಭುತ ವಿಸ್ಮಯ ಮನುಕುಲದ ಅಪೂರ್ವ ಸಿದ್ದಿ.

ಭಕ್ತಿ ಪಂಥಗಳಲ್ಲಿ ಒಂದಾದ "ಮಧುರ ಭಾವ"ವನ್ನು ವಚನಕಾರರು ಸತಿಪತಿ ಭಾವ ಶರಣ ಸತಿ – ಲಿಂಗಪತಿ ಭಾವವೆಂದು ಅಭಿವ್ಯಕ್ತಿ ಪಡಿಸಿದ್ದಾರೆ. ಈ ನಿಟ್ಟಿನಲ್ಲಿ ಬಸವಣ್ಣ, ಉರಿಲಿಂಗ ದೇವ, ಗಜೇಶ ಮಸಣಯ್ಯ ಸತಿಪತಿ ಭಾವದ ವಚನಗಳನ್ನು ಬರೆದಿರುವವರಲ್ಲಿ ಮುಖ್ಯರಾದರೂ ಅತಿ ಗಾಢವಾಗಿ ಸತಿ ಪತಿ ಭಾವ ಅಕ್ಕನ ವಚನಗಳಲ್ಲಿ ಅಭಿವ್ಯಕ್ತಿಗೊಂಡಿದೆ. ಅಕ್ಕನ ಸತಿಪತಿ ಭಾವ ಶಿವಶರಣರ ಶರಣ ಸತಿ ಲಿಂಗಪತಿ ಭಾವಕ್ಕಿಂತಲೂ ವಿಭಿನ್ನವಾದದು. ಅಕ್ಕ ಒಂದು ಹೆಣ್ಣಾಗಿ, ಸತಿಯಾಗಿ, ಪತಿಯಲ್ಲಿ ತನ್ನ ಅಂತರಂಗದ, ತುಡಿತದ, ತುಮುಲದ ಭಾವವನ್ನು ವ್ಯಕ್ತಪಡಿಸುತ್ತಾಳೆ.

ಆಧ್ಯಾತ್ಮಿಕ ಇತಿಹಾಸದಲ್ಲಿ ಮಹಾದೇವಿಯಕ್ಕನ ಜೀವನ ಒಂದು ಮಿಂಚಿನ ಶಿಖರ. ಬಾಲ್ಯದಿಂದಲೂ ಶಿವನಲ್ಲೇ ನೆಲೆಗೊಂಡ ಅವಳ ಮನಸ್ಸು ಶಿವನನ್ನೇ 'ಸತ್ಯ ಪತಿ' ಎಂದು ಒಪ್ಪಿಕೊಂಡಾಗಿತ್ತು ರೂಪ ಯೌವನಗಳ ಮಾಯೆಗೆ ಸಿಗದೇ ತನ್ನ ಪ್ರೇಮವನ್ನೆಲ್ಲಾ ಚೆನ್ನಮಲ್ಲಿಕಾರ್ಜುನನಿಗೆ ಧಾರೆ ಎರೆದಳು. ಉಳಿದ ವಚನಕಾರರು ಸತಿಪತಿ ಭಾವದ ಸಮನ್ವಯವನ್ನು ಸಾಧಿಸಿ ದಾಂಪತ್ಯ ಸುಖವನ್ನು ಅನುಭವಿಸಿ ಚಳುವಳಿಯಲ್ಲಿ ಧುಮುಕಿದರೆ ಅಕ್ಕ ದಾಂಪತ್ಯ ಸುಖದಿಂದ ವಂಚಿತಳಾಗಿಯೂ ವಿರಹ ವೇದನೆಯನ್ನು ಅನುಭವಿಸುತ್ತಾ ಹೋರಾಟಕ್ಕೆ ನಿಲ್ಲುತ್ತಾರೆ. ಚೆನ್ನಮ್ಮಲ್ಲಿಕಾರ್ಜುನನಂತಹ ಅಲೌಕಿಕ ಗಂಡನು ಅಕ್ಕನ ಬಾಳಿಗೆ ನೆಪಮಾತ್ರವಾದರೂ ಅಂತಹ ಅಪ್ಪಟ ಪ್ರಾಮಾಣಿಕ ಮನುಷ್ಯನ ಹುಡುಕಾಟದ ಅವಶ್ಯಕತೆ ಅವಳಿಗಿತ್ತೆಂದು ಆತನ ಬಗ್ಗೆ ಕಟ್ಟಿಕೊಡುವ ಗುಣವಾಚಕದ ಪ್ರತಿಮೆಗಳು, ರೂಪಕಗಳು ಧ್ವನಿಸುತ್ತವೆ.

ಹರನೇ ನೀನೆನಗೆ ಗಂಡನಾಗಬೇಕೆಂದು
ಅನಂತಕಾಲ ತಪಸ್ವಿದ್ದೆ ನೋಡಾ.....

ಎಂದು ಹರನಿಗೆ ತಾನೊಲಿದುದನ್ನು ಸುಂದರವಾಗಿ ನಿರೂಪಿಸುತ್ತಾಳೆ ಆತನಿಗೆ ಶರಣಾಗತ ವಾಗುತ್ತಾಳೆ.

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆನವ್ವಾ
ಎಡೆ ಇಲ್ಲದ ಕಡೆ ಇಲ್ಲದ ತೆರೆ ಇಲ್ಲದ ಕುರುಹಿಲ್ಲದ
ಚೆಲುವೊಂಗಾನೊಲಿದೆ ಎಲೆ ಅವ್ವ.....

ಎನ್ನುವ ಧೈರ್ಯ ಆಕೆಗೆ ಸಹಜವಾಗಿಯೇ ಬೆಳೆದು ಬಂದಿತ್ತು. ಇಂತಹ ಅಸೀಮ ಅನಂತ ನೂಡನೆ ನನ್ನ ಮದುವೆ ನಿಂದ ರೀತಿಯನ್ನು ಹೀಗೆ ಚಿತ್ರಿಸುತ್ತಾಳೆ.

ಪಚ್ಚೆಯ ನೆಲಗಟ್ಟು ಕನಕದ ತೋರಣ ,ವಜ್ರದ ಕಂಭ

ಪವಳದ ಚಪ್ಪರವಿಕ್ಕಿ.....

ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು. ಲೋಕದ ಬಲವಂತಕ್ಕೆ ಒಳಗಾಗಿ ಈಕೆ ಮದುವೆಯಾಗಬೇಕಾಯಿತು. ಆದರೆ ತನ್ನ ಅಂತರಂಗದ ಜೀವನಕ್ಕೆ ಅಡ್ಡಿಯಾದ ಗಂಡನನ್ನು ಬಿಟ್ಟು ದಿಗಂಬರಿಯಾಗಿ ಕಾಡಿಗೆ ನಡೆದಳು. ಅಕ್ಕ ಲೌಕಿಕ ಗಂಡನಿಂದ ಬಿಡುಗಡೆಯಾಗಿ ಮನುಷ್ಯನ ವ್ಯಕ್ತಿತ್ವವನ್ನು ವಿಭಿನ್ನವಾಗಿ ನೋಡುವ ಅವಳ ಬಯಕೆ ಹೊಸ ನೆಲೆಗಳ ಹುಡುಕಾಟವೇ ಆಗಿರುತ್ತದೆ.

ಚಂದನವ ಕಡಿದು ಕೊರೆದು ತೇದೊಡೆ ನೊಂದೆನೆಂದು ಕಂಪ ಬಿಟ್ಟಿತ್ತೆ...

ಪ್ರಕೃತಿಯಲ್ಲೆಲ್ಲಾ ಶಿವನ ರೂಪವನ್ನು ಕಾಣುವ ಹಂಬಲ ಅವಳದು. ಮಲ್ಲಿಕಾರ್ಜುನ ನೀನು ಎಂತಹ ತೊಂದರೆಯನ್ನಾದರೂ ತಂದು ಒಡ್ಡು, ನಿನ್ನನ್ನು ನೆನೆಯುದೇ ಬಿಡುವುದಿಲ್ಲ ಕೊನೆಗೆ ಮರಣ ತಂದೊಡ್ಡಿದರೂ ಚಿಂತೆಯಿಲ್ಲ ನಿನಗೆ ಶರಣಾಗುವುದು ನಿಲ್ಲದು ಎಂದು ಘೋಷಿಸುತ್ತಾರೆ.

ಚಿಲಿಪಿಲಿ ಎಂದೋದುವ ಗಿಳಿಗಳಿರಾ ನೀವು ಕಾಣಿರೆ ನೀವು ಕಾಣಿರೆ

ಸರವೆತ್ತಿ ಪಾ ಡುವ ಕೋಗಿಲೆಗಳಿರಾ ನೀವು ಕಾಣಿರೇ ನೀವು ಕಾಣಿರೇ.....

.....ಚೆನ್ನಮಲ್ಲಿಕಾರ್ಜುನನೆ ಲ್ಲಹನೆಂದು ನೀವು ಹೇಳಿರೇ....

ಎಂದು ಅಂಗಲಾಚುತ್ತ ಕೇಳುವ ಈ ವಚನ ವಿರಹ ಕಾವ್ಯದ ಉತ್ಕೃಷ್ಟ ಮಾದರಿಯಾಗಿದೆ. ಪ್ರೇಮದ ಪರಮೋನ್ಮಾದದಲ್ಲಿ ಧನ್ಯವಾಣಿಯಲ್ಲಿ ಚರಾಚರ ವಸ್ತುಗಳಲ್ಲೂ ಹರನನ್ನು ಬೇಡುವ ವಚನ. ಅರಣ್ಯದ ಪಕ್ಷಿಗಳಿಗೆಲ್ಲಾ ಗೋಚರನಾಗುವ ನೀನು ನನಗೆ ಅಗೋಚರನಾಗುವುದು ನ್ಯಾಯವೇ ಎಂದು ಪ್ರಶ್ನಿಸುವ ಅಕ್ಕ ಯಾರೂ ಇಲ್ಲದವಳೆಂದು ಅಳಿಗೊಳಲು ಬೇಡ ಎಂದು ಧೈರ್ಯವನ್ನು ಮಾಡಿದಳವಳು. ಅಕ್ಕ ಮದುವೆ ಎಂಬ ವ್ಯವಸ್ಥೆಯನ್ನು ನಿರಾಕರಿಸಿದವಳು. ಪ್ರತಿಭಟಿಸಿದಳವಳು ಮದುವೆಯಲ್ಲಿ ಹೆಣ್ಣಿನ ಆಯ್ಕೆಯ ಸ್ವಾತಂತ್ರವನ್ನು ತಿರಸ್ಕರಿಸುವ ಪ್ರವೃತ್ತಿಯನ್ನು ವಿರೋಧಿಸಿದಳವಳು. ಅಕ್ಕನ ಅನುಭವವು ಚನ್ನಮಲ್ಲಿಕಾರ್ಜುನನನ್ನು ಕುರಿತ ಕನಸು, ಹಂಬಲ, ತಳಮಳಗಳ ಅನ್ವೇಷಣೆಯ ಸ್ಥಿತಿಯಾಗಿರುವುದರಿಂದ ಅವಳು ಆಡುವ ಮಾತೆಲ್ಲ ಪ್ರೇಮ ಕಾವ್ಯಗಳಂತೆ, ವಿರಹ ಗೀತೆಗಳಂತಿವೆ. ತನ್ನ ವೈಚಾರಿಕತೆ ಮತ್ತು ದಿಟ್ಟ ನಡವಳಿಕೆಯಿಂದ ವಿಭಿನ್ನವೂ, ವಿಶಿಷ್ಟವೂ ಆದ ನಿಲುವಿನಿಂದ ಹೆಣ್ತನದ ಘನತೆ ಗೌರವಗಳ ಪ್ರತೀಕವಾಗಿದ್ದಾಳೆ.

ಅಕ್ಕನ ಸತಿಪತಿ ಭಾವದ ವಚನಗಳಲ್ಲಿ ಆಕೆಯು ಅನುಭವಿಸಿದ ನೋವು, ನಿರಾಸೆ, ದ್ವಂದ್ವ, ಹೋರಾಟ ಇವೆಲ್ಲ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಆಕೆಯು ತನ್ನನ್ನು ತಾನು ವಿಮರ್ಶಿಸಿ ಕೊಳ್ಳುತ್ತಲೇ ವ್ಯವಸ್ಥೆಯನ್ನು ವಿರೋಧಿಸುತ್ತಾಳೆ. ಲೌಕಿಕ ತಾಣದ ಮಾಯಾ ಬಂಧನದಿಂದ ಬಿಡುಗಡೆಯಾಗುವ ಚೆನ್ನಮ್ಮಲ್ಲಿಕಾರ್ಜುನನ ಕೂಡುವಿಕೆಗಾಗಿ ಹಾತೊರೆಯುವ ಮತ್ತು ಹರನೊಡನೆ ದೇಹ – ಮನಸ್ಸು ಅನುಭವಿಸಿದ ಪ್ರೇಮ ಪ್ರೀತಿಯ ನೆಲೆಯಲ್ಲಿ ಅಕ್ಕನ ಸತಿಪತಿ ಭಾವದ ವಚನಗಳು ತೆರೆದುಕೊಳ್ಳುತ್ತವೆ.

ಮೊದಲು ಮಾಯೆಯನ್ನು ಬಿಡಿಸಿಕೊಳ್ಳಲು ಚೆನ್ನಮಲ್ಲಿಕಾರ್ಜುನನ ಮೊರೆ ಹೋಗುತ್ತಾಳೆ. 'ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ' ಎನ್ನುವ ಅಕ್ಕ ನೀನೇ ಸೃಷ್ಟಿಸಿದ ಮಾಯೆಯನ್ನು ನೀನೆ ದಹಿಸುತ್ತಿರುವೆ ಎಂಬ ಭಾವದಲ್ಲಿ ಅಕ್ಕ ಮಹಾದೇವಿಯ ಚೆಲುವ ಗಂಡ 'ಸಾವಿಲ್ಲದ ಸಹಜ ರೂಪಿಲ್ಲದ ಚೆಲುವ ಸಜ್ಜನ' ಎಲ್ಲಾ ಗಂಡನ ಶೃಂಗಾರದ ಪರಿಗಿಂತಲೂ ಅವನ ಸಕಲ ರೂಪವನ್ನು ಕಂಡು ಸಂತುಷ್ಟಳಾದಳು.

ನಚ್ಚುಗೆ ಮನ ನಿಮ್ಮಲ್ಲಿ ಮೆಚ್ಚುಗೆ ಮನ ನಿಮ್ಮಲ್ಲಿ .....ಎನ್ನ ಪಂಚೇಂದ್ರಿಯಗಳು ಕಬ್ಬುನ ಉಂಡ ನೀರಿನಂತೆ ನಿಮ್ಮಲ್ಲಿ ಬೆರೆಸುಗೆ ಚೆನ್ನಮ್ಮಲ್ಲಿಕಾರ್ಜುನ

ಎಂದು ಆತ್ಮರ್ಪಣೆ ಮಾಡಿಕೊಳ್ಳುವ ಅಕ್ಕ ಪಾರಮಾರ್ಥಿಕ ಸಂಸಾರ ನಡೆಸಲು ಗಂಡನ ಮನೆಗೆ ಹೋಗುವೆನು ಎಂದು ಕಲ್ಯಾಣದ ಶರಣರೆಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸುವಳು.

ಜಲದ ಮಂಟಪದ ಮೇಲೆ ಉರಿಯ ಚಪ್ಪರವನ್ನಿಕ್ಕಿ
ಅಲಿಕಲ್ಲ ಹಸೆಯ ಹಾಸಿ...
ಚನ್ನಮಲ್ಲಿಕಾರ್ಜುನ ಗಂಡಂಗೆನ್ನ ಮದುವೆ ಮಾಡಿದರು.....

ಈ ಮಾತುಗಳಲ್ಲಿ ಅವಳ ಮದುವೆಯ ಕಲ್ಪನೆ ಕಂಡು ಬರುತ್ತದೆ ಅಕ್ಕಮಹಾದೇವಿಯ ಸತಿಪತಿ ಭಾವ ಲೌಕಿಕ ಸಂಬಂಧದ ಛಾಯೆಯನ್ನು ಕಳೆದುಕೊಂಡು ನಿಜವಾದ ಭಕ್ತಿ ಎನಿಸುತ್ತದೆ. ಆಧ್ಯಾತ್ಮಿಕತೆ ಮತ್ತು ಸೃಜನಶೀಲತೆಯ ದೃಷ್ಟಿಯಿಂದ ಒಳ್ಳೆ ಅನುಭಾವಿ ಅಕ್ಕಮಹಾದೇವಿ ಇವಳ ವಚನಗಳ ಮುಖ್ಯ ಗುಣ ಹೃದಯವಂತಿಕೆ. ಇಡೀ ಜೀವನವನ್ನು ಹೋರಾಟದಲ್ಲಿ ಕಳೆದಳವಳು ಬಹಿರಂಗ ಮತ್ತು ಅಂತರಂಗದ ತೊಳಲಾಟ ಇವಳ ವಚನದಲ್ಲಿದೆ.

'ಕಿಚ್ಚಿಲ್ಲದ ಬೇಗೆಯಲಿ ಬೆಂದೆನವ್ವ' ಹೀಗೆ ಬೇಯುವುದು, ಏರಿಲ್ಲದ ಗಾಯದಲ್ಲಿ ನೋಯುವುದು ಈ ಧ್ವನಿ ಭಾವಗಳೇ ಅಕ್ಕನ ಉತ್ಕೃಷ್ಟವಾದ ನೋವಿನ ಸಂಕಷ್ಟವನ್ನು ವ್ಯಾಖ್ಯಾನಿಸುತ್ತದೆ. ಈಕೆಯ ನೋವಿನ ರೂಪಕ ಅದ್ಭುತವಾದದ್ದು. ಇವೆಲ್ಲ ಅಕ್ಕನ ಅಂತರಂಗದ ಘಟನೆಗಳನ್ನು ಪರಿಚಯಿಸುತ್ತವೆ. ತನ್ನ ತನು–ಮನಗಳನ್ನು ದಂಡಿಸಿ ಮಲ್ಲಿಕಾರ್ಜುನನನ್ನು ಹುಡುಕುತ್ತಿರುವ ಪರಿ ನರಕಯಾತನೆಯಂಥದ್ದು ತನ್ನ ಇಡೀ ಶರೀರವನ್ನು ಕಠಿಣ ಪರೀಕ್ಷೆಗೆ ಒಳಪಡಿಸಿಕೊಳ್ಳುವುದರಲ್ಲೇ ಆಕೆಗೆ ಪರಮಾನಂದ.

ಹಸಿವಾದಡೆ ಭಿಕ್ಷಾನ್ನಗಳುಂಟು
ತೃಷೆಯಾ ದಡೆ ಕೆರೆಹಳ್ಳ ಬಾವಿಗಳುಂಟು

ಎಂದು ಸಮರ್ಥಿಸಿಕೊಳ್ಳುವ ದೃಷ್ಟಾಂತದಲ್ಲಿ ಅವಳ ದೃಢ ನಿರ್ಧಾರದ ಅಚಲತೆ ಗೋಚರವಾಗುತ್ತದೆ.

ಮನೆ ಮನೆ ದಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯ ಬೇಡಿದೊಡೆ ಇಕ್ಕದಂತೆ ಮಾಡಯ್ಯ..... ಎಂಬ ವಚನದಲ್ಲಿ ನನ್ನನ್ನು ಅಣು ಅಣುವಾಗಿ ಕೊಲ್ಲು ಎಂದು ನಿವೇದನೆ ಮಾಡಿಕೊಳ್ಳುತ್ತಾಳೆ. ಆಗ ಮಾತ್ರ ಮಲ್ಲಿಕಾರ್ಜುನ ನನ್ನ ನೆನಪಿನಲ್ಲಿ ಉಳಿಯುತ್ತಾನೆಂಬ ಪ್ರತಿಮೆ ಅದ್ಭುತವಾದದ್ದು. ಚೆನ್ನಮ್ಮಲ್ಲಿಕಾರ್ಜುನನನ್ನು ಹುಡುಕಲು ಹೊರಟು ಪ್ರಕೃತಿಯ ಚರಾಚರ ವಸ್ತುಗಳಲ್ಲೂ ಬೇಡುವ ಭಾವ ತೀವ್ರತೆ ಮನಸ್ಸನ್ನು ಸೆರೆ ಹಿಡಿಯುತ್ತದೆ.

'ತರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ'..... ಅಕ್ಕನು ತನ್ನ ನೋವನ್ನು ಧ್ವನಿಸಲು ಬಳಸಿಕೊಂಡಿರುವ ಈ ಉಪಮೆಯಲ್ಲಿ ಪ್ರಿಯತಮನಿಗಾಗಿ ಪ್ರಿಯತಮೆಯು ಅಳುತ್ತಿರುವ ವಿರಹ ವೇದನೆ ಕಾವ್ಯನಾತ್ಮಕವಾಗಿದೆ. ಕ್ಷಣ ಕ್ಷಣಕ್ಕೂ ನಲ್ಲನನ್ನು ಬಯಸಿ ಬೇಯುತ್ತಿರುವ ಅಕ್ಕನ ಬಯಕೆ ಎಷ್ಟು ಗಾಢವಾದುದೆಂದು ಅರ್ಥವಾಗುತ್ತದೆ. ಅಲ್ಲದೆ ಆ ಭಯಕ್ಕೆ ದುರಾಸೆಯಾದರೆ ಅದನ್ನು ಮನ್ನಿಸಿ ನಿಮ್ಮತ್ತ ತೋರಾ ಎಂಬ ಆತ್ಮವಿಮರ್ಶೆಯ ಪ್ರಾಮಾಣಿಕತೆಯೂ ಇದೆ.

ಅಕ್ಕ ಚೆನ್ನಮಲ್ಲಿಕಾರ್ಜುನನೊಡನೆ ಆಲಿಂಗನ ಗೊಂಡು ಅನುಭವಿಸಿದ ಪ್ರೇಮ ಪ್ರೀತಿ ಪ್ರಣಯದ ಸವಿಯನ್ನು ಲೈಂಗಿಕ ಪ್ರತಿಮೆಗಳನ್ನು ಕಟ್ಟಿಕೊಡುವ ಮೂಲಕ ಆಕೆಯ ವಚನಗಳು ಧ್ವನಿಸುತ್ತವೆ. ಚೆನ್ನಮಲ್ಲಿಕಾರ್ಜುನನ ರೂಪವನ್ನು ಕಟ್ಟಿಕೊಡುವ ರೀತಿಯೇ ಹೊಸದು ಹೊಳೆಯುವ ಕೆಂಜಡೆಗಳ ಮಣಿ ಮುಕುಟದ ಒಪ್ಪುವ ಸುಲಿಪಲ್ಲ ನಗೆ ಮೊಗದ..... ತನ್ನ ಆರಾಧ್ಯ ದೈವ ನಿರಾಕಾರ ಮೂರ್ತಿಯನ್ನು ತನ್ನ ಅಂತರಂಗದಲ್ಲಿ ಬೆಳೆಸಿದ ದಿವ್ಯ ಕಲ್ಪನೆಯದು ಶರಣ ಸತಿ ಲಿಂಗಪತಿಯ ಭಕ್ತಿ ನಿಷ್ಠೆ ಇದು.

ಬಂದಿಹನೆಂದು ಬಟ್ಟೆಯ ನೋಡಿ
ಬಾರದಿದ್ದರೆ ಕರಗಿ ಕೊರಗಿದೆನವ್ವ
ತಡವಾದೊಡೆ ಬಡವಾದೆ ತಾಯೆ

ಚೆನ್ನಮಲ್ಲಿಕಾರ್ಜುನನ ಒಂದಿರುಳಗಲಿದಡೆ ತಕ್ಕೆ ಸಡಿಲಿದ

ಸಡಲಿದ ಜಕ್ಕ ವಕ್ಕೆಯಂತಾದೆನವ್ವ

ತವರು ಮನೆಯಲ್ಲಿ ಗಂಡನ ಬರುವಿಕೆಗಾಗಿ ರಾತ್ರಿಯೆಲ್ಲಾ ಕಾದು ಕಾದು ಬರದೆ ಹೋದರೆ ಕಂಗಾಲಾಗುವ ಹೆಣ್ಣಿನ ಸ್ಥಿತಿಯಂತೆ ಅಕ್ಕನು ಮಮ್ಮಲ ಮರುಗುತ್ತಾಳೆ. ಅಕ್ಕ ಕೇಳಕ್ಕ ನಾನೊಂದು ಕನಸು ಕಂಡೆ..... ಎಂದು ಆತ್ಮೀಯ ದಾಟಿಯಲ್ಲಿ ತಾನು ಕಂಡ ಕನಸನ್ನು ತನ್ನನ್ನು ಕನಸಿನಲ್ಲಿ ಅಪ್ಪಿಕೊಂಡ ರೋಮಾಂಚನದ ಕ್ಷಣಗಳನ್ನು ತನ್ನ ಆತ್ಮೀಯರಿಗೆ ಹೇಳಲು ಸಾಧ್ಯವಾಗುತ್ತದೆ.

ಇಂದ್ರ ನೀಲಗಿರಿಯನ್ನೇರಿಕೊಂಡು ಚಂದ್ರಕಾಂತ ಶಿಲೆಯ ಮೆಟ್ಟಿಕೊಂಡು..

ಹೀಗೆ ತನ್ನ ಕನಸನ್ನು ಕೆಲವು ರೂಪಕಗಳಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದ್ದಾಳೆ. ಲೌಕಿಕ ಮದುವೆಯ ಸಂಪ್ರದಾಯವನ್ನು ಮೀರಿದ ಆಕೆಯ ಭಾವವೇ ವಿಚಿತ್ರವಾದದ್ದು. ಹೊಸ ಮನುಷ್ಯನ ಹುಡುಕಾಟವೇ ಆಕೆಯ ಅಂತರಂಗದ ತುಡಿತವಾಗಿದೆ. ತಾನು ಅನುಭವಿಸಿದ ಅಂತರಂಗದ ಒಳತೋಟಿಗಳನ್ನು ಹೇಳುತ್ತಾ ವ್ಯವಸ್ಥೆಯಿಂದಾದ ತನ್ನ ನೋವುಗಳನ್ನು ಅಭಿವ್ಯಕ್ತಿಸಿರುವುದನ್ನು ನೋಡಿದರೆ ಆಕೆಯ ದುಃಖ ದುಮ್ಮಾನಗಳಿಗೆ ಮಿತಿಯೇ ಇಲ್ಲವೇನೋ ಎನಿಸುತ್ತದೆ. ಆದ್ದರಿಂದ ಸಿದ್ದಯ್ಯ ಪುರಾಣಿಕರು ಅಕ್ಕನೊಂದು "ಮಹಿಳಾ ಸೃಷ್ಟಿಯ ಅದ್ಭುತ" ಎಂದು ಬಣ್ಣಿಸಿದ್ದಾರೆ "ಅಕ್ಕನ ವಚನಗಳ ಬಹುಬಾಗ ನಿಜವಾಗಿಯೂ ರಸಾರ್ದ್ರವಾದದ್ದು ಉಪಮಾನಗಳಿಂದ ಚಿತ್ರ ಕಲ್ಪನೆಗಳಿಂದ ಮನೋಹರವಾಗಿರತಕ್ಕದ್ದು ಅವಳದು ಕವಿಯ ಹೃದಯ ಕವಿಯ ಕಣ್ಣು ಎಂಬುದನ್ನು ಸಾರತಕ್ಕದ್ದು" ಎಂಬ ತೀನಂಶ್ರೀ ಅವರ ಮಾತು ಅಕ್ಕನ ಸ್ಥಿತಿಗೆ ಪುಷ್ಠಿ ನೀಡಿ ಕರುಣೆ ಉಕ್ಕುವಂತೆ ಮಾಡುತ್ತದೆ.

ನಾನು ನಿನಗೊಲಿದೆ ನೀನು ಎನಗೊಲಿದೆ
ನೀನೆನ್ನಗಲದಿಪ್ಪೆ ನಾ ನಿನ್ನ ಗಲ್ಲದಿಪ್ಪನಯ್ಯ.....

ನಿನ್ನ ಕರುಣದಿಂದ ಆತ್ಮರ್ಪಣ ಮಾಡಿ ಸಮರಸದ ಪರಮಾರ್ಥದ ಸಂಸಾರ ನಡೆಸುವೆನು ಎಂದು ನಿವೇದಿಸಿಕೊಳ್ಳುವ ಅಕ್ಕ ಮಹಾದೇವಿ ದೃಢಸಂಕಲ್ಪದ ಆದರ್ಶ ಸತಿ.

ತನ್ನ ಇಡೀ ಬದುಕನ್ನು ಸತಿಪತಿ ಭಾವದಲ್ಲಿ ಕಟ್ಟಿಕೊಳ್ಳುವ ಕನಸುಗಳು ಅವಳ ವಚನಗಳಲ್ಲಿವೆ, ರಾಜಶಾಹಿ ಪುರುಷಶಾಹಿ ಹೆಣ್ಣನ್ನು ನಡೆಸಿಕೊಂಡ ಕ್ರಮಕ್ಕೆ ವಿರೋಧವಾಗಿ ಲೌಕಿಕ ಗಂಡನನ್ನು ತಿರಸ್ಕರಿಸಿ ಈ ವ್ಯವಸ್ಥೆಯೊಳಗೆ ಸಿಗದ ಅವಳ ಆದರ್ಶ ಪತಿ ಚೆನ್ನಮಲ್ಲಿಕಾರ್ಜುನನನ್ನು ಹುಡುಕುತ್ತಿದ್ದಾಳೆ, ಸತಿಪತಿ ಭಾವ ಅವಳ ವೈಯಕ್ತಿಕ ಅಳಲಾಗದೆ ಇಡೀ ಸಮಾಜವನ್ನು ಕುರಿತ ತೀಕ್ಷ್ಣ ಪ್ರತಿಕ್ರಿಯೆಯಾಗಿದೆ. ಅಕ್ಕನು ಆಧುನಿಕತೆಯ ಹೆಣ್ಣಿನ ಮತ್ತು ಸಮಾಜಕ್ಕೆ ಒಂದು ಸ್ಫೂರ್ತಿ ಚಿಲುಮೆಯಾಗಿ ದೃಢಸಂಕಲ್ಪದ ಆದರ್ಶ ಸತಿಯಾಗಿ ರೂಪುಗೊಳ್ಳುವ ಅಕ್ಕನ ಸತಿಪತಿ ಭಾವದ ವಚನಗಳು ಅಂತರಂಗದ ಒಳತೋಟಿಯನ್ನು ಧ್ವನಿಸುತ್ತದೆ. ಅಕ್ಕಮಹಾದೇವಿಯ ಶರಣ ಸತಿ ಲಿಂಗಪತಿ ಭಾವ ಲೌಕಿಕ ಶೃಂಗಾರವಲ್ಲ ಪಾರಮಾರ್ಥಿಕ ಶೃಂಗಾರ. ದೇಹವನ್ನು ಆತ್ಮದ ದೇಗುಲವನ್ನಾಗಿಸಿ ಆ ಅಂತರಂಗದ ಗುಡಿಯಲ್ಲಿ ಪರಮಾತ್ಮನನ್ನು ಪತಿಯಾಗಿ ಸ್ವೀಕರಿಸಿ ಕೊನೆಗೆ ತಾನೇ ಪರಂಜ್ಯೋತಿಯಲ್ಲಿ ಕರಗಿ ಹೋದ ಅದ್ಭುತ ಅನುಭವ ಯಾನವೇ ಅಕ್ಕನ ಜೀವನ.

ಪರಾಮರ್ಶನ ಗ್ರಂಥಗಳು

- ನಾರಾಯಣ, ಪಿ. ವಿ. (2022). *ವಚನ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ.* ಶ್ರೀ ಮುರುಘರಾಜೇಂದ್ರ ಗಂಥಮಾಲೆ
- ನಾರಾಯಣ, ಪಿ. ವಿ. *ವಚನ ನಿರ್ವಚನ.*
- ಶಿವರುದ್ರಪ್ಪ, ಜಿ.ಎಸ್. *ಅಕ್ಕಮಹಾದೇವಿ–ಶರಣ ಚಳುವಳಿಯಲ್ಲೊಂದು ಭಿನ್ನ ಸ್ವರ.*
- ಶ್ರೀನಿವಾಸಮೂರ್ತಿ, ಎಂ. ಆರ್. (1968). *ವಚನಧರ್ಮ ಸಾರ.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

- ಸುಮಿತ್ರಾಬಾಯಿ, ಬಿ.ಎನ್. *ವಚನ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ.*
- ತೇಜಸ್ವಿನಿ ನಿರಂಜನ., ಸೀಮಂತೀನಿ ನಿರಂಜನ. (ಸಂ.) (2024). ಸ್ತ್ರೀ ವಾದಿ ಸಾಹಿತ್ಯ ವಿಮರ್ಶೆ. ಅಭಿನವ ಪ್ರಕಾಶನ.